## ಕಳೆದ ಸಂಚಿಕೆಯಲ್ಲಿ



ಕಾಗೋಡು ಸತ್ಯಾಗ್ರಹದಲ್ಲಿ ಚಳುವಳಿಗಾರರ ಪರವಾಗಿ ನಿಂತ ಲೋಹಿಯಾ ಪೊಲೀಸರ ಬಂಧನಕ್ಕೂ ಒಳಗಾದರು. ಲೋಹಿಯಾ ಭಾಗವಹಿಸುವಿಕೆಯಿಂದಾಗಿ 'ಉಳುವವನೇ ನೆಲದೊಡೆಯ' ಘೋಷವಾಕ್ಯ ಎಲ್ಲೆಡೆ ಅನುರಣಿಸಿ ಸತ್ಯಾಗ್ರಹ ತೀವ್ರಗೊಂಡಿತು. ಸತ್ಯಾಗ್ರಹ ಯಶಸ್ವಿಯಾಗುವ ಮೂಲಕ ಕರ್ನಾಟಕದಲ್ಲಿ ಸಮಾಜವಾದಿ ಪಕ್ಷ ಅಸ್ತಿತ್ವ ಕಂಡುಕೊಂಡಿತಲ್ಲದೆ, ಶಿವಮೊಗ್ಗ ಪರಿಸರದಲ್ಲಿ ಭದ್ರವಾಗಿ ನೆಲೆಕಂಡಿತು. ಶಾಂತವೇರಿ ಗೋಪಾಲಗೌಡರು ರಾಜ್ಯದ ಮುಂಚೂಣಿ ನಾಯಕರಾಗಿ ಹೊರಹೊಮ್ಮಿದರು. ಫ್ರಾಂಕ್‌ಫರ್ಟ್‌ನಲ್ಲಿ ನಡೆದ ಸಮಾಜವಾದಿಗಳ ವಿಶ್ವ ಸಮ್ಮೇಳನದಲ್ಲಿ ಭಾಗವಹಿಸಿದ ಲೋಹಿಯಾ, ಅಮೆರಿಕ ಮತ್ತು ರಷ್ಯಾಗಳ ನಡುವಣ ಸಂಘರ್ಷದಿಂದ ತಪ್ಪಿಸಿಕೊಳ್ಳಲು 'ಏಷ್ಯಾದ ಸಮಾಜವಾದ'ವನ್ನು ರೂಪಿಸುವ ಚಿಂತನೆ ಹಂಚಿಕೊಂಡರು. ಫ್ರಾಂಕ್‌ಫರ್ಟ್‌ನ ನಂತರ ಬರ್ಲಿನ್, ಪ್ಯಾರಿಸ್ ಹಾಗೂ ಅಮೆರಿಕದ ಹಲವೆಡೆ ಅವರು ಸಂಚರಿಸಿದರು. ಈ ವಿಶ್ವಸಂಚಾರದಿಂದಾಗಿ ಲೋಹಿಯಾ ಅವರ ಚಿಂತನೆಗಳು ಜಗತ್ತಿನ ಗಮನಸೆಳೆಯಲು ಸಾಧ್ಯವಾಯಿತು.

ಬಳಸುವ ಕುರುಡು ಪ್ರಚೋದನೆ ಹುಟ್ಟುವುದು ಇಂಥ ಸಂದರ್ಭಗಳಲ್ಲೇ' ಅನ್ನಿಸುತ್ತದೆ. ಕ್ವಿಟ್ ಇಂಡಿಯಾ ಕಾಲದ ಭೂಗತ ಚಳುವಳಿಗಾರನ ಸಿಟ್ಟು ರಾಜಕಾರಣಿ ಲೋಹಿಯಾರಲ್ಲೂ ಮುಂದುವರಿದಿತ್ತು!

ಸಮಾಜವಾದಿ ತತ್ವ ರೂಪಿಸುತ್ತಾ, ತತ್ವಕ್ಕೆ ತಕ್ಕಂತೆ ಪಕ್ಷ ಕಟ್ಟುವ ಕೆಲಸದಲ್ಲಿ ಲೋಹಿಯಾ ಮುಳುಗಿದ್ದರು. ಈ ಕಾಲದಲ್ಲೂ ಅವರಿಗೆ ಇರಲು ಮನೆಯಿರಲಿಲ್ಲ. ಎಲ್ಲಿದ್ದರಲ್ಲೇ ಅವರ ವಾಸ! ಈ ನಡುವೆ ಅವರು ಪಿಎಸ್‌ಪಿಯ ಜನರಲ್ ಸೆಕ್ರೆಟರಿಯಾಗಬೇಕಾಗಿ ಬಂತು. ಕಾರ್ಯದರ್ಶಿಯಾದ ವರ್ಷವೇ 1954ರ ತಿರುವಾಂಕೂರು–ಕೊಚ್ಚಿ ಪ್ರಾಂತದ ವಿಧಾನಸಭಾ ಚುನಾವಣೆಯ ಸವಾಲೂ ಎದುರಾಯಿತು.

ವಿರೋಧ ಪಕ್ಷಗಳ ಮತಗಳು ವಿಭಜನೆಯಾಗುವುದನ್ನು ತಪ್ಪಿಸಲು ಪಿಎಸ್‌ಪಿ ಹಾಗೂ ಕಮ್ಯುನಿಸ್ಟ್ ಪಕ್ಷಗಳು ಚುನಾವಣಾ ಒಪ್ಪಂದ ಮಾಡಿಕೊಂಡವು. ಎರಡೂ ಪಕ್ಷಗಳ ಸ್ಥಾನಗಳು ಒಟ್ಟುಗೂಡಿದರೂ ಬಹುಮತ ಬರಲಿಲ್ಲ. ಆಗ ಕಾಂಗ್ರೆಸ್ ಪಕ್ಷ ಪಿಎಸ್‌ಪಿಗೆ ಬೆಂಬಲ ನೀಡಿತು. ಲೋಹಿಯಾ ಈ ಬೆಂಬಲವನ್ನು ಎರಡು ಕಾರಣಗಳಿಗಾಗಿ ಒಪ್ಪಿದರು: ಒಂದು, ಇದು ಪಿಎಸ್‌ಪಿ ನೇತೃತ್ವದ ಸರ್ಕಾರ; ಹೀಗಾಗಿ ಪಕ್ಷದ ಸಿದ್ಧಾಂತಕ್ಕೆ ಅನುಗುಣವಾಗಿ ಸರ್ಕಾರ ನಡೆಸಬಹುದು. ಎರಡು, ಕಾಂಗ್ರೆಸ್ ಪಕ್ಷ ಪಿಎಸ್‌ಪಿ ಸರ್ಕಾರಕ್ಕೆ ತೊಂದರೆ ಕೊಟ್ಟರೆ, ಜನರ ಸಹಾನುಭೂತಿ ನಮ್ಮ ಪಕ್ಷದ ಕಡೆಗೆ ತಿರುಗುತ್ತದೆ; ಆಗ ಮುಂದಿನ ಚುನಾವಣೆಯಲ್ಲಿ ಪಕ್ಷ ಹೆಚ್ಚಿನ ಸ್ಥಾನ ಗಳಿಸಬಹುದು.

ರಾಜ್ಯವೊಂದರಲ್ಲಿ ಸಮಾಜವಾದಿ ನೇತೃತ್ವದ ಮೊಟ್ಟ ಮೊದಲ ಸರ್ಕಾರ ಬಂತು. ಪಿಎಸ್‌ಪಿಯ ಪಟ್ಟಂ ಥಾನು ಪಿಳ್ಳೈ ಮುಖ್ಯಮಂತ್ರಿಯಾದರು.

ಈ ಘಟ್ಟದಲ್ಲಿ ಪಿಎಸ್‌ಪಿಯ ಕಾರ್ಯಕರ್ತರು ಬೇರೆ ಬೇರೆ ರಾಜ್ಯಗಳಲ್ಲಿ 'ಹೋರಾಟ ರಾಜಕಾರಣ' ಶುರು ಮಾಡಿದರು. ರಾಜಸ್ಥಾನ, ಆಂಧ್ರ, ಬಿಹಾರ ಸರ್ಕಾರಗಳ ದುರಾಡಳಿತದ ವಿರುದ್ಧ ಪ್ರತಿಭಟನೆಗಳು ಶುರುವಾದವು. ಒಮ್ಮೆ ಉತ್ತರಪ್ರದೇಶ ಸರ್ಕಾರ ಇದ್ದಕ್ಕಿದ್ದಂತೆ ನೀರಿನ ತೆರಿಗೆಯನ್ನು ಏಳುಪಟ್ಟು ಹೆಚ್ಚಿಸಿತು. ಪಕ್ಷದ ಕಾರ್ಯಕರ್ತರಿಗೆ ಸತ್ಯಾಗ್ರಹದ ಕರೆ ಕೊಟ್ಟ ಲೋಹಿಯಾ, ರೈತರನ್ನೂ ಹೋರಾಟಕ್ಕೆ ಕರೆದರು.

ಉತ್ತರಪ್ರದೇಶ ಸರ್ಕಾರದ ವಿರುದ್ಧ ಸತ್ಯಾಗ್ರಹ ಶುರುವಾಯಿತು. ಸರ್ಕಾರ ಸತ್ಯಾಗ್ರಹಿಗಳ ವಿರುದ್ಧ 1932ರ ಬ್ರಿಟಿಷ್ ಕಾಲದ 'ವಿಶೇಷಾಧಿಕಾರ ಕಾಯ್ದೆ' ಬಳಸಿತು; ಪೊಲೀಸರು ಸತ್ಯಾಗ್ರಹಿಗಳ ಮೇಲೆ ಲಾಠಿ ಪ್ರಹಾರ ಮಾಡಿದರು. 1500 ಸತ್ಯಾಗ್ರಹಿಗಳನ್ನು ಬಂಧಿಸಿದರು. ಲೋಹಿಯಾರನ್ನೂ ಬಂಧಿಸಿದರು. 1932ರ ವಿಶೇಷಾಧಿಕಾರ ಕಾಯ್ದೆಯಡಿ ಸತ್ಯಾಗ್ರಹವನ್ನು ಪ್ರಚಾರ ಮಾಡಿದವರನ್ನೂ ಬಂಧಿಸುವ ಅಧಿಕಾರ ಸರ್ಕಾರಕ್ಕಿತ್ತು.

ಬ್ರಿಟಿಷ್ ಕಾಲದ ಪೊಲೀಸರಿಗಿಂತ ಭಿನ್ನವಾದ ಕಿರುಕುಳವನ್ನು ಸ್ವತಂತ್ರ ಭಾರತದ ಪೊಲೀಸರು ಕಂಡುಹಿಡಿದಿದ್ದರು! ಲೋಹಿಯಾರನ್ನು ಪದೇ ಪದೇ ಒಂದು ಠಾಣೆಯಿಂದ ಇನ್ನೊಂದು ಠಾಣೆಗೆ ವರ್ಗಾಯಿಸತೊಡಗಿದರು. ಬಂಧನವಾದ 22 ದಿನಗಳ ನಂತರ ಲೋಹಿಯಾ ಪ್ರಕರಣ ಅಲಹಾಬಾದ್ ಹೈಕೋರ್ಟಿನ ಡಿವಿಶನ್ ಬೆಂಚಿನೆದುರು ಬಂತು.

ಹೈಕೋರ್ಟಿನಲ್ಲಿ ಲೋಹಿಯಾ ಕೊಟ್ಟ ಹೇಳಿಕೆ ಮುಂದೆ ಪ್ರಖ್ಯಾತವಾಯಿತು:

'ನಾನಿಲ್ಲಿ ಆಪಾದಿತನಾಗಿ ಬಂದಿಲ್ಲ. ಆಪಾದಿತನ ಸ್ಥಾನದಲ್ಲಿರುವುದು ಸರ್ಕಾರ. ನಾನಿಲ್ಲಿ ದೂರುದಾರನಾಗಿ ಬಂದಿದ್ದೇನೆ. 1932ರ ವಿಶೇಷಾಧಿಕಾರ ಕಾಯ್ದೆ ಸಂವಿಧಾನಕ್ಕೆ ವಿರೋಧವಾಗಿದೆಯೋ ಇಲ್ಲವೋ ಎಂಬ ಬಗ್ಗೆ ಕೋರ್ಟಿನ ತೀರ್ಪು ಕೋರಿ ಬಂದಿದ್ದೇನೆ. ನನ್ನ ಪ್ರಕಾರ, ಈ ಕಾಯ್ದೆ ಬ್ರಿಟಿಷ್ ಆಯುಧಾಗಾರದ ತುಕ್ಕು ಹಿಡಿದ ಆಯುಧ. ಇದು ಸ್ವತಂತ್ರ ಭಾರತಕ್ಕೆ ತಕ್ಕುದಲ್ಲ. ನಾನು ಯಾವ ಕಾನೂನನ್ನೂ ಉಲ್ಲಂಘಿಸಿಲ್ಲ. ಅನ್ಯಾಯದ ಕಾನೂನನ್ನು ವಿರೋಧಿಸಬೇಕು ಎಂದಷ್ಟೇ ಪ್ರಚಾರ ಮಾಡಿದ್ದೇನೆ.

'ನಾಗರಿಕ ಅವಿಧೇಯತೆ'ಯನ್ನು ಅಪರಾಧ ಎನ್ನುವುದು ಮಾನವ ಕುಲಕ್ಕೆ ಭಾರತ ಗಾಂಧೀಜಿಯ ಮೂಲಕ ಕೊಟ್ಟ ಸತ್ಯಾಗ್ರಹವನ್ನು ಅವಮಾನಿಸಿದಂತೆ. ಇದು ಭಕ್ತ ಪ್ರಹ್ಲಾದ, ಚಾರ್ವಾಕ, ಸಾಕ್ರೆಟಿಸ್, ಹೆನ್ರಿ ಡೇವಿಡ್ ಥೋರೊ, ಗಾಂಧೀಜಿಯವರ ತನಕ ನಡೆದುಬಂದಿರುವ ಸತ್ಯಾಗ್ರಹಿಗಳ ಮಹಾಪರಂಪರೆಗೆ ಮಾಡಿದ ಅವಮಾನ. 'ನಾಗರಿಕ ಅವಿಧೇಯತೆ'ಯನ್ನು 'ಅಪರಾಧ' ಎಂದರೆ ಸರ್ಕಾರವೇ ಸಶಸ್ತ್ರ ದಂಗೆಗೆ ಆಹ್ವಾನ ಕೊಟ್ಟಂತಾಗುತ್ತದೆ. ನಾನು ಸೆರೆಮನೆಯನ್ನು ದ್ವೇಷಿಸುತ್ತೇನೆ. ಆದರೆ ದಮನಕಾರರು ಇರುವ ತನಕ ನನ್ನಂಥ ಸೆರೆಮನೆದ್ವೇಷಿಗಳು ಸೆರೆಮನೆ ಸೇರುತ್ತಲೇ ಇರಬೇಕಾಗುತ್ತದೆ.'

ವಿಶೇಷಾಧಿಕಾರ ಕಾಯ್ದೆಯ ಸಂವಿಧಾನಾತ್ಮಕತೆಯ ಬಗ್ಗೆ ಇಬ್ಬರು ನ್ಯಾಯಾಧೀಶರ ನಡುವೆ ಭಿನ್ನ ಅಭಿಪ್ರಾಯಗಳು ಬಂದವು. ಪ್ರಕರಣ ಪೂರ್ಣಪೀಠದೆದುರು ಬಂತು.

ಈ ನಡುವೆ ಪ್ರಜಾಸಮಾಜವಾದಿ ನೇತೃತ್ವದ ಸರ್ಕಾರ ಕಾಂಗ್ರೆಸ್ ಜೊತೆಗೆ ಹೆಚ್ಚಿನ ಹೊಂದಾಣಿಕೆ ಮಾಡಿಕೊಂಡು ಸರ್ಕಾರವನ್ನು ಭದ್ರಪಡಿಸಿಕೊಳ್ಳುವ ಬಗ್ಗೆ ಯೋಚಿಸುತ್ತಿತ್ತು. ಒಮ್ಮೆ ಕಾರ್ಮಿಕರು ಮುಷ್ಕರ ಹೂಡಿದಾಗ ಪೊಲೀಸರು ಕಾರ್ಮಿಕರ ಮೇಲೆ ಗುಂಡು ಹಾರಿಸಿದರು.

ಲೋಹಿಯಾ ಅವರಿಗೆ ಇಂಥ ವಿಚಾರಗಳಲ್ಲಿ ಕಾಂಗ್ರೆಸ್ ಸರ್ಕಾರಗಳನ್ನು ವಿರೋಧಿಸಿಕೊಂಡೇ ಬಂದಿದ್ದರು. ಇದೀಗ ತಮ್ಮ ಪಕ್ಷದ ನೇತೃತ್ವದ ಸರ್ಕಾರವೇ ಕಾರ್ಮಿಕರ ಮೇಲೆ ಗುಂಡು ಹಾರಿಸಿತ್ತು. ಲೋಹಿಯಾ ಸೆರೆಮನೆಯಿಂದಲೇ ಮುಖ್ಯಮಂತ್ರಿಗೆ ಟೆಲಿಗ್ರಾಂ ಕೊಟ್ಟರು. ಪ್ರತಿಯನ್ನು ಪಕ್ಷದ ಅಧ್ಯಕ್ಷ ಕೃಪಲಾನಿಯವರಿಗೂ ಕಳಿಸಿದರು:

'ಮುಷ್ಕರನಿರತರು ಅಕಸ್ಮಾತ್ ಹಿಂಸೆಗಿಳಿದಿದ್ದರೂ ಗುಂಡು ಹಾರಿಸಿರುವುದನ್ನು ಸಮರ್ಥಿಸಲಾಗದು. ಮುಷ್ಕರನಿರತರು ಶಸ್ತ್ರಾಸ್ತ್ರ ಹಿಡಿದು ಪ್ರತಿಭಟಿಸಿದ್ದರೆ ಅಥವಾ ಕೊಲೆಗಳಿಗೆ ಮುಂದಾಗಿದ್ದರೆ ಮಾತ್ರ ಗುಂಡು ಹಾರಿಸುವುದನ್ನು ಸಮರ್ಥಿಸಬಹುದು. ಗೋಲಿಬಾರ್ ಕುರಿತ ವಿಚಾರಣೆಗೆ ತಕ್ಷಣ ಆಯೋಗ ರಚಿಸಬೇಕು. ಮೂಲತತ್ವಗಳನ್ನು ಎತ್ತಿ ಹಿಡಿಯಲು ಸರ್ಕಾರ ರಾಜೀನಾಮೆ ಕೊಡಬೇಕು. ಇದು ನನ್ನ ಸಲಹೆ.'

ಮುಖ್ಯಮಂತ್ರಿ ಈ ಸಲಹೆಯನ್ನು ತಿರಸ್ಕರಿಸಿದರು. ಪಕ್ಷದ ಅಧ್ಯಕ್ಷರೂ ಸಲಹೆಯನ್ನು ಉಪೇಕ್ಷಿಸಿದರು. ಲೋಹಿಯಾ ಪಕ್ಷದ ಕಾರ್ಯದರ್ಶಿ ಸ್ಥಾನಕ್ಕೆ ಹಾಗೂ ಪಕ್ಷದ ಕಾರ್ಯಕಾರಿಣಿಗೆ ರಾಜೀನಾಮೆ ಕೊಟ್ಟರು.

ಲೋಹಿಯಾ ಬಂಧನ ಕುರಿತಂತೆ ತೀರ್ಪು ಕೊಟ್ಟ ಮುಖ್ಯ ನ್ಯಾಯಾಧೀಶರು 1932ರ ವಿಶೇಷಾಧಿಕಾರ ಕಾಯ್ದೆ ಸಂವಿಧಾನಕ್ಕೆ ವಿರುದ್ಧವಾಗಿದೆ ಎಂದು ತೀರ್ಮಾನಿಸಿದರು. ತೀರ್ಪಿನಲ್ಲಿ ಸಾಕ್ರೆಟಿಸ್, ಥೋರೊ, ಗಾಂಧೀಜಿಯವರನ್ನು ಉಲ್ಲೇಖಿಸುತ್ತಾ